ಅ) ಹಾಗಿದ್ದಲ್ಲಿ, ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಂತೆ ಚುನಾವಣೆಗಳನ್ನು ಮುಂದಕ್ಕೆ ಹಾಕಲಾಗುವುದೇ? ಅಥವಾ ಸರಿಯಾದ ಸಮಯದಲ್ಲಿ ನಡೆಸಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) :

ಅ) ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದುದು ನಿಜ. ಆದರೆ ರಿಟ್ ಅರ್ಜಿಗಳನ್ನು ನಂತರ ವಜಾ ಮಾಡಲಾಗಿದೆ.

ಆ) ಚುನಾವಣೆಗಳು ಸರ್ಕಾರಿ ಅಧಿಸೂಚನೆಯಂತೆ ನಡೆಯುತ್ತದೆ.

ಬೆಂಗಳೂರು ನಗರದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಬಗ್ಗೆ

159 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮದ ವತಿಯಿಂದ ಪಡಿತರ ಅಂಗಡಿಗಳನ್ನು ನಡೆಸುತ್ತಿರುವುದು ನಿಜವಲ್ಲವೆ?

2) ಹಾಗಿದ್ದರೆ, ಈ ಅಂಗಡಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿಗಮದ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ರಜೆಯ ಸೌಲಭ್ಯಗಳಿವೆಯೇ?

3) ಸಿಬ್ಬಂದಿ ವರ್ಗದವರಿಗೆ ರಜಾ ಚೀಟಿಯನ್ನು ಅಂಗಡಿಗಳ ಗೋಡೆಗಳ ಮೇಲೆ ಅಂಟಿಸಿ ಹಾಗೂ ಒಮ್ಮೊಮ್ಮೆ ದಾಸ್ತಾನು ತರಲು ಹೋಗಿರುವುದಾಗಿ ತಿಳಿಸಿ, ಸದರಿ ಸಿಬ್ಬಂದಿ ಮನಬಂದಂತೆ ಅಂಗಡಿಗಳನ್ನು ಮುಚ್ಚುತ್ತಿರುವುದರಿಂದ ಈ ಅಂಗಡಿಗಳಲ್ಲಿರುವ ಕಾರ್ಡುದಾರರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸೂಕ್ತ ಕ್ರಮವನ್ನೇನಾದರೂ ಕೈಗೊಳ್ಳಲಾಗುವುದೇ?

4) ಕರ್ನಾಟಕ ಆಹಾರ ನಿಗಮದಿಂದ ನಡೆಸಲಾಗುತ್ತಿರುವ ಅಂಗಡಿಗಳನ್ನು ನ್ಯಾಯಬೆಲೆ ಅಂಗಡಿಗಳನ್ನಾಗಿ ಪರಿವರ್ತಿಸಿ ವಿದ್ಯಾವಂತ ನಿರುದ್ಯೋಗಿಗಳಿಗೆ ಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1) ಹೌದು, 201 ಚಿಲ್ಲರೆ ಮಳಿಗೆಗಳಿವೆ.

2) ರಜೆ ಸೌಲಭ್ಯಗಳಿದ್ದು, 2 ನೇ ಶನಿವಾರ ರಜೆ ದಿನದಂದು ಚಿಲ್ಲರೆ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ದಿನಕ್ಕೆ ಬದಲಾಗಿ 3ನೇ ಶನಿವಾರದಂದು ಚಿಲ್ಲರೆ ಮಳಿಗೆಗಳ ರಜಾ ದಿನವಾಗಿರುತ್ತದೆ.

ಹಬ್ಬ ಹರಿದಿನಗಳಲ್ಲಿ ಒಂದೇ ಸಮನೇ 2-3 ದಿವಸಗಳು ಸರ್ಕಾರಿ ರಜಾ ದಿನ ಬಂದಲ್ಲಿ ಅಂತಹ ದಿನಗಳಂದು ಪಡಿತರ ಚೀಟಿದಾರರ ಅನುಕೂಲಕ್ಕಾಗಿ ಚಿಲ್ಲರೆ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ.

3) ಚಿಲ್ಲರೆ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾರಾಟ ಸಹಾಯಕರು ತುರ್ತು ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿಯಿಂದ ಸಾಂದರ್ಭಿಕ ರಜೆ ಮಂಜೂರು ಮಾಡಿಸಿಕೊಂಡು ಚಿಲ್ಲರೆ ಮಳಿಗೆಯ ಬಾಗಿಲು ಮುಚ್ಚಿ ಚೀಟಿದಾರರಿಗೆ ಮಾಹಿತಿಗಾಗಿ (ಉಪ ನಿರ್ದೇಶಕರ ಆದೇಶದ ಮೇರೆಗೆ) ರಜೆ ಚೀಟಿಯನ್ನು ಮಳಿಗೆಯ ಗೋಡೆಗೆ ಅಂಟಿಸುವುದು ನಿಜ ಸಂಗತಿ.

ಚಿಲ್ಲರೆ ಮಳಿಗೆಯಲ್ಲಿ ಮಾರಾಟ ಮಾಡುವ ದಾಸ್ತಾನನ್ನು ಸಗಟು ಮಳಿಗೆಯಿಂದ ಎತ್ತುವಳಿ ಮಾಡಬೇಕಾಗುತ್ತದೆ. ಈ ಎತ್ತುವಳಿ ದಿನಾಂಕವನ್ನು ಸಂಬಂಧಪಟ್ಟ ಉಪನಿರ್ದೇಶಕರು ನಿಗದಿ ಮಾಡಿರುತ್ತಾರೆ. ಆ ದಿನ ತಪ್ಪದೇ ದಾಸ್ತಾನು ಎತ್ತುವಳಿ ಮಾಡಲೇ ತೀರಬೇಕಾಗಿದೆ. ಅಂತಹ ಸಂದರ್ಭಗಳಲ್ಲಿಯೂ ಸಹಾ ಈ ರೀತಿ ಗ್ರಾಹಕರಿಗೆ ಮಾಹಿತಿಗಾಗಿ ತಿಳಿಸುವುದಕ್ಕೋಸ್ಕರ ಚೀಟಿ ಅಂಟಿಸಬೇಕಾಗುತ್ತದೆ.

ಚಿಲ್ಲರೆ ಮಳಿಗೆಯ ಮಾರಾಟ ಸಹಾಯಕರು ಹೆಚ್ಚಿನ ದಿನಗಳು ರಜೆ ಹೋದಲ್ಲಿ ಪಡಿತರ ಚೀಟಿದಾರರ ಹಿತದ ದೃಷ್ಟಿಯಿಂದ ರಜೆ, ಅವಧಿಗೆ ಕಛೇರಿಯಲ್ಲಿರುವ ಬದಲಿ ಮಾರಾಟ ಸಹಾಯಕರನ್ನು ವ್ಯವಸ್ಥೆ ಮಾಡಲಾಗುವುದು.

4) ಬೆಂಗಳೂರಿನ ನಾಗರೀಕರಿಗೆ ಸಮರ್ಪಕ ಮತ್ತು ಪ್ರಾಮಾಣಿಕವಾಗಿ ಪಡಿತರ ಪದಾರ್ಥಗಳನ್ನು ಸದಾ ವಿತರಿಸುವ ಮೂಲ ಉದ್ದೇಶದಿಂದ ಹಾಗೂ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಕೊಡುವ ಆದ್ಯ ಕರ್ತವ್ಯದ ಮೇರೆಗೆ ಅಂದಿನ ಸರ್ಕಾರ ಈ ಉದ್ದೇಶಕ್ಕಾಗಿ ನೌಕರರನ್ನು ನೇಮಿಸಿ ಈ ಕೆಲಸ ವಹಿಸಲಾಗಿದೆ. ಅಲ್ಲದೆ ಈ ಉದ್ಯೋಗದಲ್ಲಿರುವ ಶೇ 90 ಭಾಗ ಮಂದಿ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳಾಗಿರುತ್ತಾರೆ. ಇವರುಗಳಲ್ಲಿ ಹೆಚ್ಚಿನ ನೌಕರರು ಪದವೀಧರರು. ಈ ನೌಕರರ ಸೇವಾವಧಿ ಈಗಾಗಲೇ 7 ವರ್ಷ ಕ್ಕೂ ಹೆಚ್ಚಿನದಾಗಿರುತ್ತೆ. ಇವರುಗಳನ್ನು ವಜಾ ಮಾಡುವುದಾಗಲೀ ಅಥವಾ ಮಾಡಿದ್ದಲ್ಲಿ ಕಾನೂನು ತೊಡಕು ಹಾಗೂ ನಿರುದ್ಯೋಗ ಸಮಸ್ಯೆ ಉದ್ಭವವಾಗುವುದು.

ಬೆಂಗಳೂರು ನಗರದಲ್ಲಿರುವ ಶ್ರೀರಾಮಪುರ ಪ್ರದೇಶದಲ್ಲಿನ ಬಲ್ಕ್‌ವೆಂಡಿಂಗ್ ಬೂತುಗಳ ಕನ್ಸೇಶನರಿ ಶಿಪ್‌ಗಳನ್ನು ರದ್ದುಪಡಿಸುವ ಬಗ್ಗೆ

160-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಶ್ರೀರಾಮಪುರದಲ್ಲಿ ಬಲ್ಕ್‌ವೆಂಡಿಂಗ್ ಬೂತುಗಳ ಸಂಖ್ಯೆ 315 ಮತ್ತು 318 ರಲ್ಲಿ ಅನೇಕ ಬಾರಿ ಕಲಬೆರಕೆ ಪ್ರಕರಣಗಳು ಮತ್ತು ಚೆಕ್ ಬಾನ್ಸಿಂಗ್ ಪ್ರಕರಣಗಳು ಪತ್ತೆಯಾಗಿರುವುದು ನಿಜವಲ್ಲವೇ?

ಆ) ಮೇಲ್ಕಂಡ ಎರಡೂ ಬಲ್ಕ್‌ವೆಂಡಿಂಗ್ ಬೂತುಗಳಿಗೆ ಮದರ್ ಡೈರಿಯವರು ಹಲವಾರು ಬಾರಿ ನೋಟೀಸುಗಳನ್ನು ಕೊಟ್ಟರೂ ಸೂಕ್ತವಾದ ಕನ್ಸೇಶನರಿಗಳು ದೊರೆಯದೇ ಇರುವುದರಿಂದ ಈ ಮೇಲ್ಕಂಡ ಬೂತುಗಳ ಕನ್ಸೇಶನರಿ ಶಿಪ್ಪನ್ನು ಬದಲಾಯಿಸಲು ಸಾಧ್ಯವಾಗದೇ ಇರುವುದು ನಿಜವೇ?

ಇ) ಹಾಗಿದ್ದಲ್ಲಿ ಇದುವರೆವಿಗೂ ಈ ಮೇಲ್ಕಂಡ ಎರಡೂ ಬಲ್ಕ್‌ವೆಂಡಿಂಗ್ ಬೂತುಗಳಿಗೆ ಕನ್ಸೇಶನರಿಗಳನ್ನು ಬದಲಾಯಿಸಿ ಹೊಸ ಕನ್ಸೇನರಿಗಳನ್ನು ನೇಮಿಸುವ ಸಲುವಾಗಿ ಎಷ್ಟು ಬಾರಿ ಜಾಹೀರಾತು ನೀಡಲಾಗಿದೆ. (ಜಾಹೀರಾತು ನೀಡಿದ್ದಲ್ಲಿ ಆ ಬಗ್ಗೆ ವಿವರಗಳನ್ನು ಕೊಡುವುದು)

ಈ) ಇಲ್ಲದಿದ್ದಲ್ಲಿ, ಸರ್ಕಾರ ಕೂಡಲೇ ಈ ಮೇಲ್ಕಂಡ ಎರಡೂ ಬೂತುಗಳ ಕನ್ಸೇಶನರಿಶಿಪ್‌ಗಳನ್ನು ಬದಲಾಯಿಸಿ ಹೊಸ ಕನ್ಸೇಶನರಿಗಳಿಗಾಗಿ ಜಾಹೀರಾತು ನೀಡಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು):

ಅ) ನಿಜ